ಶಿವಮೊಗ್ಗ ನಗರ ಸಭಾ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ಸಂಸ್ಕರಣೆಯ ಬಗ್ಗೆ

23 (190) ಶ್ರೀ ಚಂದ್ರಶೇಖರಪ್ಪ, ಹೆಚ್ ಎಂ (ಶಿವಮೊಗ್ಗ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ವ್ಯಾಪ್ತಿಯಲ್ಲಿ ಪ್ರತಿದಿನ ಸಂಗ್ರಹವಾಗುವ ಘನ ತ್ಯಾಜ್ಯ ವಸ್ತುಗಳ ಅಂದಾಜು ಪ್ರಮಾಣವೆಷ್ಟು ಹಾಲಿ ಈ ಬಗ್ಗೆ ಘನ ತ್ಯಾಜ್ಯ ವಸ್ತು ಸಂಗ್ರಹಣೆಯನ್ನು ನಿಯಮಾನುಸಾರ ಮಾಡಲಾಗುತ್ತಿದೆಯೇ

ಆ) ಸರ್ಕಾರದ ವತಿಯಿಂದ ಶಿವಮೊಗ್ಗ ನಗರದ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಹಗೂ ಸಂಸ್ಕರಣೆಗೆ ಸೂಕ್ತ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ

ಇ) ಈ ಯೋಜನೆ ಯಾವ ಹಂತದಲ್ಲಿರುತ್ತದೆ ಯಾವಾಗ ಈ ಯೋಜನೆ ಅನ್ವಯ ಘನ ತ್ಯಾಜ್ಯ ವಸ್ತುಗಳ ಸಂಸ್ಕರಣೆ ಪ್ರಾರಂಭವಾಗುವುದು (ವಿವರದೊಂದಿಗೆ ತಿಳಿಸುವಿರಾ)?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಪ್ರತಿದಿನ ಅಂದಾಜು 84 ಟನ್ ಘನ ತ್ಯಾಜ್ಯ ಸಂಗ್ರಹವಾಗುತ್ತಿದೆ ಹಾಲಿ ಸಂಗ್ರಹವಾಗುವ ಘನ ತ್ಯಾಜ್ಯ ವಸ್ತು ಸಂಗ್ರಹಣೆಯನ್ನು ನಿಯಮಾನುಸಾರ ಮಾಡಲಾಗುತ್ತಿದೆ

ಆ) ವೈಜ್ಞಾನಿಕ ರೀತಿಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮಾಡುವ ಬಗ್ಗೆ ಅಗತ್ಯವಾದ ಭೂಮಿ ಖರೀದಿಸಲು ಸರ್ಕಾರವು ಹಣವನ್ನು ಬಿಡುಗಡೆ ಮಾಡಿದ್ದು, ಈ ಕಾರ್ಯವು ಪ್ರಗತಿಯಲ್ಲಿದ್ದು, ಅಂತಿಮ ಹಂತದಲ್ಲಿರುತ್ತದೆ, ಸಂಸ್ಕರಣೆಯ ಬಗ್ಗೆ ಮುಂದೆ ಯೋಜನೆ ಹಮ್ಮಿಕೊಳ್ಳಬೇಕಾಗಿರುತ್ತದೆ

ಇ) ಘನತ್ಯಾಜ್ಯ ವಸ್ತುಗಳ ಸಂಸ್ಕರಣೆಯ ಬಗ್ಗೆ ಯೋಜನೆಯನ್ನು ತಾಂತ್ರಿಕವಾಗಿ ಅಧ್ಯಯನ ಮಾಡಿ ಹಮ್ಮಿಕೊಳ್ಳಬೇಕಾಗಿರುತ್ತದೆ

ಶಿವಮೊಗ್ಗ ಜಾರ್ಗಲ್ ಹಳ್ಳ ಪಿಕ್ ಅಪ್ ಯೋಜನೆಯ ಬಗ್ಗೆ

24 (191) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಜಾರ್ಗಲ್ ಹಳ್ಳ ಪಿಕಪ್ ಯೋಜನೆ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ಸರ್ಕಾರದಿಂದ ಈ ಯೋಜನೆಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು ಈ ಯೋಜನೆಯಿಂದ ನೀರಾವರಿ ಅನುಕೂಲ ಪಡೆಯುವ ಜಮೀನಿನ ವಿಸ್ತೀರ್ಣವೆಷ್ಟು

ಆ) ಶಿವಮೊಗ್ಗ ವಿಧಾನಸಭಾ ವ್ಯಾಪ್ತಿಯಲ್ಲಿ ಸರ್ಕಾರದ ಪ್ರಸ್ತಾವನೆಯಲ್ಲಿರುವ ಏತ ನೀರಾವರಿ ಯೋಜನೆಗಳೆಷ್ಟು, (ವಿವರ ನೀಡುವಿರಾ)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಕಾಮಗಾರಿಯು ಪ್ರಗತಿಯಲ್ಲಿದ್ದು 2004–05 ನೇ ಸಾಲಿಗೆ ಸಾಕಷ್ಟು ಅನುದಾನ ಲಭ್ಯವಾದಲ್ಲಿ ಕಾಮಗಾರಿಯನ್ನು 2004ನೇ ಇಸವಿಯ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು ಈ ಯೋಜನೆಯ ಅಂದಾಜು ವೆಚ್ಚ ರೂ 29 95 ಲಕ್ಷ ಈ ಯೋಜನೆಗೆ 2003–04ನೇ ಸಾಲಿನಲ್ಲಿ

ಯಾವುದೇ ಅನುದಾನ ನೀಡಿರುವುದಿಲ್ಲ ಸದರಿ ಯೋಜನೆಯಿಂದ ಅನುಕೂಲ ಪಡೆಯುವ ಜಮೀನಿನ ವಿಸ್ತೀರ್ಣ 300 ಎಕರೆಗಳು

ಇ) ಪ್ರಸಕ್ತ ಸಾಲಿಗೆ ಯಾವುದೇ ಏತ ನೀರಾವರಿ ಯೋಜನೆಗಳ ಪ್ರಸ್ತಾವನೆಗಳು ಇರುವುದಿಲ್ಲ

ಧಾರವಾಡ ಜಿಲ್ಲೆಯಲ್ಲಿ ಹೊಸ ಬಸ್ ಡಿಪೋ ಪ್ರಾರಂಭಿಸುವ ಬಗ್ಗೆ

25 (193) ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ, (ಕಲ್ಗುಟಗಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಸಾರಿಗೆ ಸಂಸ್ಥೆಯ ಡಿಪೋಗಳ ಸಂಖ್ಯೆ ಎಷ್ಟು ಎಲ್ಲೆಲ್ಲಿ ಅಸ್ತಿತ್ವದಲ್ಲಿವೆ

ಆ) ಜಿಲ್ಲೆಯಲ್ಲಿ ನೂತನವಾಗಿ ಬಸ್ ಘಟಕಗಳನ್ನು ಸ್ಥಾಪಿಸಲು ಸಾರಿಗೆ ಇಲಾಖೆ ನಿರ್ಧರಿಸಿದೆಯೇ ಎಲ್ಲೆಲ್ಲಿ ಸ್ಥಳ ಗುರುತಿಸಲಾಗಿದೆ

ಇ) ಕಲಘಟಗಿಯಲ್ಲಿ ಬಸ್ ಡಿಪೋ ಸ್ಥಾಪಿಸುವ ಪ್ರಸ್ತಾವ ಸಂಸ್ಥೆಯ ಮುಂದಿದೆಯೇ ಈಗಾಗಲೇ ಮಂಜೂರಾತಿ ಆಗಿದೆಯೇ

ಈ) ಮಂಜೂರಾತಿ ಆಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುತ್ತದೆ ವಿಳಂಭಕ್ಕೆ ಕಾರಣಗಳೇನು?

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಒಟ್ಟು 05

1) ಹುಬ್ಬಳ್ಳಿ ನಗರ ಸಾರಿಗೆ –1

2) ಹುಬ್ಬಳ್ಳಿ ನಗರ ಸಾರಿಗೆ–2

3) ಹುಬ್ಬಳ್ಳಿ ಗ್ರಾಮಾಂತರ ಘಟಕ – 1

4) ಹುಬ್ಬಳ್ಳಿ ಗ್ರಾಮಾಂತರ ಘಟಕ – 2

ಹಾಗೂ 5) ಧಾರವಾಡ ಘಟಕ

ಆ) ಹೌದು

1) ನವಲಗುಂದ (2) ಕಲಘಟಗಿ ಮತ್ತು (3) ಕುಂದಗೋಳ

ಇ) ಹೌದು 2002–03ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ

ಈ) ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು ಅದು ಪೂರ್ಣಗೊಂಡ ನಂತರ ಆಂತರಿಕ ಬಂಡವಾಳನ್ನಾದರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು

ಚಿಂತಾಮಣಿ ಕ್ಷೇತ್ರದ ವೆಂಕಟಾಪುರ ದೊಡ್ಡಕೆರೆ ದುರಸ್ಥಿ ಮಾಡುವ ಬಗ್ಗೆ

27 (112) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೇಳೂರು ಹೋಬಳಿ ಬಾಗೇಪಲ್ಲಿ ತಾಲ್ಲೂಕು ವೆಂಕಟಾಪುರ ದೊಡ್ಡಕೆರೆ ನಾದುರಸ್ತಿಯಾಗಿ ಕೆಲವು ತಿಂಗಳುಗಳ ಹಿಂದೆ ಬಿದ್ದ ಮಳೆಗೆ ಕೆರೆಕಟ್ಟೆ ಒಡೆದು ಹೋಗಿ ನೀರು ರೈತರ ಬೆಳೆಗಳ ಮೇಲೆ ಹರಿದು ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ